ಭಾರತೀಯ ಸಂಸ್ಕೃತಿಯ ಹಿರಿಮೆ

ವೈಷ್ಣವಿ ಪಿ.

'ಅನೇಕತೆಯಲ್ಲಿ ಏಕತೆ' ಎಂಬುದು ಭಾರತೀಯ ಸಂಸ್ಕೃತಿಯ ವಿಶೇಷತೆಯಾಗಿದ್ದು, ಜೀವನದ ವೈವಿಧ್ಯಪೂರ್ಣವಾದ ಹತ್ತು ಹಲವು ಮಜಲುಗಳಲ್ಲಿ ಇದು ವ್ಯಕ್ತವಾಗುತ್ತದೆ. ಹೊಸ ಅರಿವಿನೊಂದಿಗೆ ನಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಅಗತ್ಯ ನಮ್ಮದಾಗಿದೆ. ಈ ಕುರಿತು ವಿವರಿಸಿರುವ ಲೇಖಕಿ, ಮೈಸೂರು ಆಶ್ರಮದ ಭಕ್ತರಾಗಿದ್ದು, ಮೈಸೂರು ಗೀತಾ ಶಿಶು ಶಿಕ್ಷಣ ಸಂಸ್ಥೆಯಲ್ಲಿ ಇಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದಾರೆ.

ಸಂಸ್ಕೃತಿ ಎಂದರೇನು? ನಾವು ಬದುಕುವ ರೀತಿ. ಅದು ಪ್ರಕಟವಾಗುವುದು ನಮ್ಮ ಆಚಾರ-ವಿಚಾರ, ನಡೆನುಡಿ, ವಿಧ ವಿಧವಾದ ಉಡುಪು, ಆಹಾರ ಪದ್ಧತಿ, ಭಾಷೆ, ಕಲೆ-ಸಾಹಿತ್ಯ ಮುಂತಾದವುಗಳಲ್ಲಿ. ಭಾರತದಲ್ಲಿ ಪ್ರಾಚೀನಕಾಲದಿಂದಲೂ ಬೆಳೆದು ಬಂದ ಈ ಬಗೆಯ ಸಂಸ್ಕೃತಿ ವೈವಿಧ್ಯದಿಂದ ಕೂಡಿದ್ದು ಹಾಗೂ ಅತ್ಯಂತ ಸಮೃದ್ಧವಾದದ್ದು. ನಮ್ಮ ಯುವಜನಾಂಗ ಇತ್ತೀಚೆಗೆ ನಮ್ಮ ಸಾಂಸ್ಕೃತಿಕ ವೈಭವವನ್ನು ಅರಿಯದೆ ಕೇವಲ ಪಾಶ್ಚಿಮಾತ್ಯ ಸಂಸ್ಕೃತಿಯ ಅನೇಕ ಆಧುನಿಕ ವಿಚಾರಗಳನ್ನು ಅಂಧವಾಗಿ ಅನುಕರಿಸುವುದು ಒಂದು ಬಗೆಯ ಫ್ಯಾಷನ್ ಆಗಿ ಬಿಟ್ಟಿದೆ. ನಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಅನಿವಾರ್ಯತೆ ಇಂದು ಎಂದಿಗಿಂತ ಹೆಚ್ಚಾಗಿದೆ. ಇದನ್ನು ಮಾಡುವ ಮುನ್ನ ನಮ್ಮ ಸಂಸ್ಕೃತಿ ಎಂತಹದು ಎಂಬುದನ್ನು ನಾವು ಅರಿತುಕೊಳ್ಳಬೇಕು.

ಭಾರತ ಎಂದ ಕೂಡಲೇ ವಿದೇಶೀಯರ ಮನಸ್ಸಿನಲ್ಲಿ ಮೂಡುವುದು 'ಭಾರತೀಯ ಸಂಸ್ಕೃತಿ' ಎಂಬ ಅಂಶ. ಭಾರತದ ಒಂದೊಂದು ಪ್ರದೇಶದಲ್ಲಿಯೂ ಹಲವು ಬಗೆಯ ಭಾಷೆ, ವೈವಿಧ್ಯತೆಗಳನ್ನು ನೋಡಬಹುದು. ಇಲ್ಲೆಲ್ಲ ಸಾವಿರಾರು ವರ್ಷಗಳಿಂದ ನಾನಾ ಬಗೆಯ ಹಬ್ಬ, ಸಂಪ್ರದಾಯ ಇವುಗಳನ್ನು ಆಚರಿಸಿ ಕೊಂಡು ಬರುತ್ತಿದ್ದಾರೆ.

ಪ್ರಾಚೀನ ಕಾಲದ ಋಷಿ, ಮುನಿಗಳು, ಸಾಧು-ಸಂತರು ನೀಡಿರುವ ವೇದ-ಉಪನಿಷತ್ತುಗಳು ಹಾಗೂ ಉಪದೇಶಗಳು ಈಗಲೂ ಜನರಿಗೆ ಆದರ್ಶವಾಗಿವೆ. ಇದು ಹಲವಾರು ಸಂತರು, ಅವತಾರಗಳು ಜನ್ಮವೆತ್ತಿ ಬಂದ ಪುಣ್ಯಭೂಮಿ. ಜನರು ಧರ್ಮ, ಸಂಸ್ಕೃತಿಗಳನ್ನು ಬಿಡಬಾರದೆಂದು ಹಾಗೂ ಅವರು ಆಧ್ಯಾತ್ಮಿಕವಾಗಿ ಮುನ್ನಡೆಯಬೇಕೆಂದು ಸಂತರು ಹಾಗೂ ಭಗವಂತನು ಜನ್ಮವೆತ್ತಿ ಬರುತ್ತಾರೆ.

ನಮ್ಮ ಸಂಸ್ಕೃಯ ವೈಶಿಷ್ಟ್ಯ : ಬೇರೆ ದೇಶಗಳ ಸಂಸ್ಕೃತಿಗಿಂತ ನಮ್ಮ ದೇಶದ ಸಂಸ್ಕೃತಿ ಹೇಗೆ ಭಿನ್ನ ? ನಮ್ಮ ಸಂಸ್ಕೃತಿಯಲ್ಲಿರುವ ಕೆಲವು ಗುಣಗಳನ್ನೀಗ ನೋಡೋಣ: ಇತರರನ್ನು ಕಂಡಾಗ ಎರಡೂ ಕೈಗಳನ್ನು ಜೋಡಿಸಿ 'ನಮಸ್ತೆ' ಎನ್ನುತ್ತೇವೆ. 'ಅತಿಥಿ ದೇವೋ ಭವ' ಎಂಬ ವೇದವಾಕ್ಯವನ್ನು ನಂಬುವ ಭಾರತೀಯರು ಅತಿಥಿಗಳನ್ನು ದೇವರಂತೆ ಕಂಡು ಆದರಿಸುತ್ತಾರೆ. ಮನೆಗೆ ಬಂದ ಅತಿಥಿಗಳಿಗೆ ಸತ್ಕಾರ, ಉಪಚಾರ ಮಾಡಿ, ಅವರಿಗಾಗಿ ಸಮಯ ನೀಡಿ ಅವರ ಸೇವೆ ಮಾಡುತ್ತಾರೆ. ಯಾವುದೇ ಶುಭಕಾರ್ಯವನ್ನು ಆರಂಭಿಸುವ ಮುನ್ನ ಮೊದಲು ದೇವರಿಗೆ ನಮಸ್ಕರಿಸುವುದು, ಬಳಿಕ ಹಿರಿಯರ ಆಶೀರ್ವಾದ ಪಡೆಯುವುದು ನಮಗೆ ಜನ್ಮ ದಿಂದಲೇ ಹೇಳಿಕೊಟ್ಟಿರುವ ಒಂದು ಪದ್ಧತಿ. ಇದು ಭಾರತದೆಲ್ಲೆಡೆ, ವೈವಿಧ್ಯದಿಂದ ಕೂಡಿದ ಸಮಾಜಗಳಲ್ಲಿ ಕಂಡುಬರುವ ಒಂದು ಪದ್ಧತಿ. ದೊಡ್ಡವರಾಗಲಿ, ಚಿಕ್ಕವರಾಗಲಿ, ಅಕ್ಕಪಕ್ಕದ ಜನರನ್ನು ಹಾಗೂ ಅವರ ಜಾತಿ, ಮತ, ಸಂಸ್ಕೃತಿಗಳನ್ನು ಗೌರವಿಸಬೇಕೆಂದು ನಮ್ಮ ಸಂಸ್ಕೃತಿ ನಮಗೆ ಹೇಳಿಕೊಡುತ್ತದೆ.

ನಮ್ಮ ಸಂಸ್ಕೃತಿಯಲ್ಲಿ ಕಂಡುಬರುವ ಇನ್ನೊಂಡು ವೈಶಿಷ್ಟ್ಯ ವೆಂದರೆ, ಪರರಿಗೆ ಸಹಾಯ ಮಾಡುವ ಗುಣ. ಚಿಕ್ಕಂದಿನಿಂದಲೇ

ಇದನ್ನು ಹೇಳಿಕೊಡಲಾಗುತ್ತದೆ. ತಮ್ಮ ಸುತ್ತಮುತ್ತಲ ಜನರೊಂದಿಗೆ ಉತ್ತಮ ಬಾಂಧವ್ಯವನ್ನಿಟ್ಟುಕೊಂಡು, ಅವರ ಸುಖ ದುಃಖಗಳಲ್ಲಿ ಭಾಗಿಯಾಗಿ, ಅವರ ನೋವುನಲಿವುಗಳನ್ನು ಹಂಚಿಕೊಂಡು ಸಹಬಾಳ್ವೆಯನ್ನು ನಡೆಸಲು ಅವರಿಗೆ ಕಲಿಸಿಕೊಡುತ್ತಾರೆ.

ಹಬ್ಬಹರಿದಿನಗಳು: ಇನ್ನು ಹಬ್ಬಹರಿದಿನಗಳ ವಿಷಯಕ್ಕೆ ಬರೋಣ. ನಮ್ಮ ದೇಶದ ಪ್ರತಿಯೊಂದು ಗ್ರಾಮಗಳಲ್ಲೂ, ಪ್ರತಿಯೊಂದು ಪ್ರದೇಶಗಳಲ್ಲೂ ಹತ್ತುಹಲವು ಹಬ್ಬಗಳನ್ನು ಆಚರಿಸುವುದನ್ನು ಕಾಣುತ್ತೇವೆ. ವಿವಿಧ ಪ್ರದೇಶಗಳಲ್ಲಿ ಒಂದೇ ರೀತಿಯ ಹಬ್ಬವನ್ನು ಆಚರಿಸುವುದು ಇಲ್ಲಿನ ವಿಶೇಷ. ಅವುಗಳಲ್ಲಿ ಮುಖ್ಯವಾದುದೆಂದರೆ, ದೀಪಾವಳಿ, ಗಣೇಶ ಚತುರ್ಥಿ, ಜನ್ಮಾಷ್ಟಮಿ, ಶಿವರಾತ್ರಿ , ಯುಗಾದಿ, ಮಕರ ಸಂಕ್ರಾಂತಿ (ಪೊಂಗಲ್), ಓಣಂ, ವಿಜಯದಶಮಿ, ದುರ್ಗಾಪೂಜೆ, ಬಕ್ರೀದ್, ಈದ್-ಉಲ್-ಫಿತರ್, ಕ್ರಿಸ್‌ಮಸ್, ಬುದ್ಧ ಜಯಂತಿ, ವೈಶಾಖಿ ಇವು. ಇವುಗಳೊಂದಿಗೆ ಆಯಾ ಪ್ರದೇಶದ ಜನರು ತಮ್ಮದೇ ಆದ ಕೆಲವು ಹಬ್ಬಗಳನ್ನೂ ಆಚರಿಸುತ್ತಾರೆ. ಎಲ್ಲೆಡೆ ತಮ್ಮದೇ ಆದ ಪೂಜಾವಿಧಾನಗಳು, ಹಬ್ಬದ ಊಟ, ಉಡುಗೆ ತೊಡುಗೆ — ಇವುಗಳನ್ನು ಹೊಂದಿದ್ದು, ಅವು ಆ ಪ್ರದೇಶದ ವೈಶಿಷ್ಟ್ಯವನ್ನು ತೋರಿಸಿಕೊಡುತ್ತವೆ. ಆಯಾ ಪ್ರದೇಶದ ಸಾಧು, ಸಂತರ ಜಯಂತಿಯನ್ನು ಆಚರಿಸುವುದೂ ಇದೆ. ರಾಷ್ಟ್ರೀಯ ಹಬ್ಬಗಳಲ್ಲಿ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ಗಾಂಧಿ ಜಯಂತಿ ಮುಖ್ಯವಾದವುಗಳು.

ಉಡುಗೆತೊಡುಗೆ: ಇನ್ನು ಸಾಂಪ್ರದಾಯಿಕ ಉಡುಗೆಗೆ ಬಂದರೆ, ನಮ್ಮಲ್ಲಿ ಸೀರೆ, ಧೋತಿ, ಪೈಜಾಮ ಮತ್ತು ಕುರ್ತಾ ಮುಂತಾದವುಗಳನ್ನು ಉಡುತ್ತಾರೆ. ಉಡುಗೆಗಳ ಬಗೆ ಒಂದಾದರೆ ಅವುಗಳನ್ನು ಉಡುವ ಶೈಲಿ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿವೆ. ಪಾಶ್ಚಾತ್ಯರ ಪ್ರಭಾವದಿಂದ ಭಾರತೀಯ ಉಡುಗೆಗಳು ಪಶ್ಚಿಮದ ಉಡುಗೆಗಳೊಂದಿಗೆ ಮಿಶ್ರಣಗೊಂಡಿವೆ. ಇತ್ತೀಚೆಗಂತೂ ನಮ್ಮ ಉಡುಗೆಗಳು ಪಾಶ್ಚಾತ್ಯ ಉಡುಗೆಗಳೇ ಆಗಿಬಿಟ್ಟಿವೆ. ಆದರೆ ಪಾಶ್ಚಾತ್ಯರನ್ನು ಆಕರ್ಷಿಸುವ ಇನ್ನೊಂದು ಭಾರತೀಯ ಅಂಶವೆಂದರೆ ನಮ್ಮ ಉಡುಗೆ — ಇತ್ತೀಚೆಗೆ ಪಾಶ್ಚಾತ್ಯರೂ ಕೂಡ ನಮ್ಮ ಉಡುಗೆತೊಡುಗೆಗಳನ್ನು ತೊಡಲು ಆರಂಭಿಸಿದ್ದಾರೆ. ನಾವು ಮಾತ್ರ ನಮ್ಮ ಸಂಸ್ಕೃತಿಯನ್ನು ಬಿಟ್ಟು ಪಾಶ್ಚಾತ್ಯರ ಆಧುನಿಕ ಬಟ್ಟೆಬರೆ ಧರಿಸಿ ಅನುಕರಿಸುತ್ತಿದ್ದೇವೆ ಎಂಬುದೇ ವಿಪರ್ಯಾಸ.

ಆಹಾರ: ನಮ್ಮ ದೇಶದ ವಿವಿಧ ಪ್ರದೇಶಗಳಲ್ಲಿ ವೈವಿಧ್ಯಮಯವಾದ ಆಹಾರ ಪದ್ಧತಿಗಳನ್ನು ನಾವು ನೋಡುತ್ತೇವೆ. ಸಸ್ಯಾಹಾರ, ಮಾಂಸಾಹಾರ ಎರಡರಲ್ಲೂ ಸಾಕಷ್ಟು ವೈವಿಧ್ಯಮಯವಾದ ಅಡುಗೆ ಪದ್ಧತಿಗಳು ನಮ್ಮಲ್ಲಿ ಬೆಳೆದುಬಂದಿವೆ. ಸಮುದ್ರತೀರದ ಪ್ರದೇಶಗಳಲ್ಲಿ ಮೀನಿನ ಆಹಾರ, ಇತರ ಕಡೆಗಳಲ್ಲಿ ಅಲ್ಲಿ ದೊರೆಯುವ ವಸ್ತುಗಳ ಬಳಕೆಯನ್ನು ಕಾಣುತ್ತೇವೆ. ಹಲವು ಬಗೆಯ ತರಕಾರಿ, ಮಸಾಲೆ ಪದಾರ್ಥಗಳ ಬಳಕೆ ಇಲ್ಲಿನ ವಿಶೇಷತೆ. ಹಿಂದೆ ಪಾಶ್ಚಾತ್ಯ ದೇಶದವರನ್ನು ಸೆಳೆದುದು ಮಸಾಲೆ ಪದಾರ್ಥಗಳೇ ಎಂಬುದು ಗಮನಾರ್ಹವಾದ ಸಂಗತಿ.

ಕಲೆ, ಶಿಲ್ಪಕಲೆ: ಹಿಂದಿನ ಕಾಲದಲ್ಲಿ ರಾಜ ಮಹಾರಾಜರುಗಳು ಕಟ್ಟಿಸಿದ ದೇವಾಲಯ, ಶಿಲ್ಪಗಳಲ್ಲಿ ಹಲವನ್ನು ನಾವು ಇಂದಿಗೂ ನೋಡಬಹುದು. ವಿವಿಧ ರೀತಿಯ ದೇವಾಲಯ, ಕಟ್ಟಡ, ಸ್ಮಾರಕಗಳನ್ನು ನಿರ್ಮಿಸಿರುವುದು ಆಗಿನ ಕಾಲದ ಕಲೆಯನ್ನು ಅರಿಯಲು ಪ್ರಮುಖವಾದ ಒಂದು ಮಾಧ್ಯಮವಾಗಿವೆ. ಭಾರತದಲ್ಲಿ ಇಂದಿಗೂ ಉಳಿದಿರುವ ಪ್ರಾಚೀನ ದೇವಾಲಯಗಳಲ್ಲಿ ಶ್ರೀರಂಗದ ರಂಗನಾಥ ಸ್ವಾಮಿ ದೇವಾಲಯ, ಬೇಲೂರು-ಹಳೇಬೀಡಿನ ದೇವಾಲಯ, ಪುರಿಯ ಶ್ರೀಜಗನ್ನಾಥ ಮಂದಿರ, ಬೃಂದಾವನದ ಅನೇಕ ಮಂದಿರಗಳು, ಮಧುರೆಯ ಮೀನಾಕ್ಷೀ ಮಂದಿರ, ಸಾಂಚಿಯ ಬೌದ್ಧ ಸ್ತೂಪ ಮುಂತಾದವು ಪ್ರಸಿದ್ಧ

ವಾಗಿವೆ. ಇತರ ಪ್ರಾಚೀನ ಸ್ಮಾರಕಗಳಲ್ಲಿ ಅಜಂತಾ- ಎಲ್ಲೋರ ಗಳಲ್ಲಿರುವ ಗುಹಾಮಂದಿರ, ತಾಜ್ ಮಹಲ್, ಅಶೋಕನ ಸ್ತಂಭ, ಕೊನಾರ್ಕ್ ದೇವಾಲಯ, ಪ್ರಾಚೀನ ಚರ್ಚುಗಳು ಪ್ರಮುಖ ವಾಗಿವೆ. ಅದೇ ರೀತಿಯಲ್ಲಿ ಹಲವು ಪ್ರದೇಶಗಳಲ್ಲಿ ಉಳಿದಿರುವ ಪ್ರಾಚೀನ ಶಿಲಾಶಾಸನಗಳು ಹಿಂದಿನ ಇತಿಹಾಸವನ್ನು ಅರಿತು ಕೊಳ್ಳಲು ಪ್ರಮುಖ ಆಕರಗಳಾಗಿವೆ.

ಲಲಿತಕಲೆಗಳು: ನರ್ತನವು ನಮ್ಮ ಸಂಸ್ಕೃತಿಯ ಒಂದು ಪ್ರಮುಖ ಅಂಗವಾಗಿದೆ. ನಮ್ಮ ರಾಜ್ಯದ ಯಕ್ಷಗಾನ, ಮಹಾ ರಾಷ್ಟ್ರದ ಲಾವಣಿ, ಆಂಧ್ರದ ಕೋಲಾಟವೇ ಮೊದಲಾದ ಜಾನ ಪದ ನೃತ್ಯಗಳು, ಭರತನಾಟ್ಯ , ಒಡಿಸ್ಸಿ ನೃತ್ಯ, ಕಥಕ್, ಮೋಹಿನಿ ಯಾಟ್ಟಂ ಮೊದಲಾದ ಶಾಸ್ತ್ರೀಯ ನರ್ತನಶೈಲಿಗಳು ಈ ದೇಶದ ನೃತ್ಯಕಲೆಯನ್ನು ಸಮೃದ್ಧಗೊಳಿಸಿವೆ. ಚಿತ್ರಕಲೆಯಲ್ಲಿ ಅಜಂತಾ-ಎಲ್ಲೋರ ಗುಹೆ ಗಳಲ್ಲಿ ಚಿತ್ರಿಸಿರುವ ಚಿತ್ರಗಳು, ಸಾಂಪ್ರದಾಯಿಕ ಚಿತ್ರಕಲೆ, ರಾಜಾ ರವಿವರ್ಮ ಮೊದಲಾದವರ ಆಧುನಿಕ ಕಲೆ ಇವು ಪ್ರಸಿದ್ಧ ವಾಗಿವೆ. ಭಾರತೀಯ ಸಂಗೀತ ಕೂಡ ಶಾಸ್ತ್ರೀಯ ಹಾಗೂ ಜಾನಪದ ಪ್ರಕಾರಗಳಿಂದ ಸಂಪನ್ನವಾಗಿದೆ; ಅನೇಕ ಪಾರಂಪರಿಕ ವಾದ್ಯಗಳ ಬಳಕೆ ಕೂಡ ಇಲ್ಲಿದೆ. ಹಲವು ಪಾಶ್ಚಿ ಮಾತ್ಯ ವಾದ್ಯಗಳನ್ನು ಕೂಡ ನಮ್ಮ ಸಂಸ್ಕೃತಿಗೆ ಅನುಗುಣವಾಗಿ ಅಳವಡಿಸಿಕೊಂಡಿರುವುದು ನಮ್ಮ ಸಂಸ್ಕೃತಿಯ ವಿಶೇಷತೆಯನ್ನು ಸೂಚಿಸುತ್ತದೆ.

ನಮ್ಮ ಸಂಸ್ಕೃತಿಯನ್ನು ನಾವು ಮರೆಯಬಾರದು. ಈ ಸಂಸ್ಕೃತಿಯ ಹಿರಿಮೆಯನ್ನು ನಾವು ಎತ್ತಿ ಹಿಡಿಯಬೇಕು. ಇತ್ತೀ ಚೆಗೆ ನಾವು ಪಾಶ್ಚಾತ್ಯ ಸಂಸ್ಕೃತಿಗೆ ಮಾರುಹೋಗಿ ನಮ್ಮ ಶಾಸ್ತ್ರೀಯ, ಪರಂಪರಾಗತ ಸಂಸ್ಕೃತಿಯನ್ನು ಮರೆಯುತ್ತಿರು ವುದು ದುಃಖಕರವಾದ ವಿಷಯವಾಗಿದೆ. ಇದನ್ನರಿತು, ನಮ್ಮ ಸಂಸ್ಕೃತಿಯ ಶ್ರೇಷ್ಠ ಹಾಗೂ ಭವ್ಯ ಪರಂಪರೆಯನ್ನು ಇತರರಿಗೂ ತಿಳಿಸಿಕೊಡಬೇಕಾದುದು ಭಾರತೀಯರಾದ ನಮ್ಮೆಲ್ಲರ ಕರ್ತವ್ಯ ವಾಗಿದೆ. ✷

❖ **ಶಿಷ್ಯ :** ಭಗವಂತ ನನ್ನವನೇ ಆದ ಮೇಲೆ ಅವನನ್ನು ನೋಡಲು ಪ್ರಾರ್ಥಿಸುವ ಅಗತ್ಯವೇನಿದೆ? ನಮ್ಮವರೇ ಆಗಿರುವವರು ಕರೆಯದಿದ್ದರೂ ಕೂಡ ನಮ್ಮ ಬಳಿಗೆ ಬರುತ್ತಾರೆ. ತಂದೆ, ತಾಯಿ ಹೇಗೋ ಹಾಗೆ ಭಗವಂತ ನಮ್ಮನ್ನು ನೋಡಿ ಕೊಳ್ಳುತ್ತಾನೇನು?

ಶ್ರೀಮಾತೆ : ಹಾಗೇ ಮಾಡುತ್ತಾನೆ ಮಗೂ, ಅವನೇ ನಮ್ಮ ತಂದೆ, ತಾಯಿ ಆಗಿದ್ದಾನೆ. ಅವನೇ ತಾಯಿ, ತಂದೆಯರ ರೂಪದಲ್ಲಿ ಪಾಲನೆ ಮಾಡುತ್ತಿದ್ದಾನೆ. ಅವನೇ ನಮ್ಮನ್ನು ನೋಡಿ ಕೊಳ್ಳುತ್ತಾನೆ. ಇಲ್ಲದಿದ್ದರೆ, ನೀನು ಎಲ್ಲಿದ್ದೆ, ಈಗ ಎಲ್ಲಿದ್ದೀಯ? ನಿನ್ನ ಹೆತ್ತವರು ನಿನ್ನನ್ನು ಪಾಲನೆ ಮಾಡಿದರು, ಕೊನೆಗೆ ನೋಡುತ್ತಾರೆ, ನೀನು ಅವರಿಗೆ ಸೇರಿದವನಲ್ಲ ಅಂತ. ಕಾಗೆಯ ಗೂಡಿನಲ್ಲಿ ಕೋಗಿಲೆಯ ಮರಿ ಬೆಳೆಯುವುದಿಲ್ಲವೇ, ಹಾಗೆ.

❖ ಕೆಲಸ ಮಾಡದಿದ್ದರೆ ಮನಸ್ಸು ಚೆನ್ನಾಗಿರುತ್ತದೆಯೆ? ಆದ್ದರಿಂದ ಕೆಲಸ ಮಾಡುತ್ತಿರಬೇಕು. ಅದರಿಂದ ಮನಸ್ಸು ಸುಸ್ಥಿತಿಯಲ್ಲಿರುತ್ತದೆ.

❖ ಒಬ್ಬನೇ ಗುರು ಹಲವರಿಗೆ ಮಂತ್ರದೀಕ್ಷೆ ನೀಡುತ್ತಾನೆ. ಆದರೆ ಎಲ್ಲರೂ ಒಂದೇ ರೀತಿ ಇರುತ್ತಾರೆಯೆ? ಅವರವರ ಯೋಗ್ಯತೆಗನುಗುಣವಾಗಿ ಅವರವರ ಉನ್ನತಿಯುಂಟಾಗು ವುದು. ಜಯರಾಂಬಾಟಿಯಲ್ಲಿ ಒಬ್ಬ ಭಕ್ತ ನನಗೆ ಹೇಳಿದ, 'ಅಮ್ಮಾ, ನನ್ನನ್ನು ಹುಚ್ಚನನ್ನಾಗಿ ಮಾಡಿ' ಅಂತ. ನಾನಾಗ, 'ನೀನೇಕೆ ಹುಚ್ಚನಾಗಬೇಕು? ತುಂಬಾ ಪಾಪಗಳನ್ನು ಮಾಡದೆ ಯಾರಾದರೂ ಹುಚ್ಚರಾಗುತ್ತಾರೇನು?' ಎಂದೆ. ಅವನು ಹೇಳು ತ್ತಿದ್ದ, 'ನನ್ನ ತಮ್ಮ ಶ್ರೀರಾಮಕೃಷ್ಣರ ದರ್ಶನ ಪಡೆದಿದ್ದಾನೆ. ನನಗೂ ಅವರ ದರ್ಶನ ಮಾಡಿಸಿ' ಅಂತ. ನಾನಂದೆ, 'ಭೌತಿಕ ಕಣ್ಣುಗಳಿಂದ ಯಾರು ತಾನೇ ಅವರನ್ನು ಹಾಗೆ ನೋಡಿದ್ದಾರೆ? ಕಣ್ಣು ಮುಚ್ಚಿದಾಗ ಮಾತ್ರ ಯಾರಾದರೂ ಭಗವಂತನನ್ನು ಕಾಣಬಲ್ಲರು. ಕಣ್ಣು ಮುಚ್ಚಿದಾಗ ಚಿತ್ರ ಕಣ್ಣಮುಂದೆ ಬರುವು ದಿಲ್ಲವೆ? ಅವನೇನೋ ಚಿಕ್ಕ ಹುಡುಗ, ಅದೇ ರೀತಿ ಮನಸ್ಸಿನಲ್ಲಿ ಶ್ರೀರಾಮಕೃಷ್ಣರನ್ನು ಚಿತ್ರಿಸಿಕೊಂಡು ಅದನ್ನೇ ದರ್ಶನ ಎಂದು ಹೇಳಿರಬೇಕು.' ಅನಂತರ ನಾನಂದೆ, 'ನೀನು ಕೂಡ ಸಾಧನೆ, ಭಜನೆ ಮಾಡು, ಶ್ರೀರಾಮಕೃಷ್ಣರನ್ನು ಪ್ರಾರ್ಥಿಸು; ನಿನಗೂ ಅವರ ದರ್ಶನವಾಗುವುದು.' ಮನುಷ್ಯನಿಗೆ ತನ್ನ ಮನಸ್ಸಿ ನಲ್ಲೇ ತಿಳಿದುಬರುತ್ತದೆ, ತಾನು ಸಾಧನೆಯಲ್ಲಿ ಎಷ್ಟು ಮುಂದು ವರಿದಿದ್ದೇನೆ, ಎಷ್ಟರಮಟ್ಟಿಗೆ ತನಗೆ ಜ್ಞಾನವುಂಟಾಗಿದೆ ಅಂತ. ತನಗೆ ಎಷ್ಟರಮಟ್ಟಿಗೆ ಭಗವಂತನ ಸಾನ್ನಿಧ್ಯ ಲಭಿಸಿದೆ ಎಂದು ತನ್ನ ಆಂತರ್ಯದಲ್ಲೇ ತಿಳಿದುಬರುವುದು. ಅದಲ್ಲದೆ ಭೌತಿಕ ಕಣ್ಣುಗಳಿಂದ ಯಾರು ತಾನೇ ಭಗವಂತನನ್ನು ಕಂಡಿದ್ದಾರೆ?

ಶ್ರೀಶಾರದಾದೇವಿ ವಚನವೇದದಿಂದ (ಪು.೧೬೯-೭೭)